ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾಡ್ ಸಂಖ್ಯೆ.63, ಜಯಮಹಲ್

ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ: 07.05.2022 ರಂದು ಶನಿವಾರ ಮಧ್ಯಾಹ್ನ 3.00 ಗಂಟೆಗೆ ಸಹಾಯಕ ಆಯುಕ್ತರು(ಆಡಳಿತ-I) ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ.63 ಬಿ.ಬಿ.ಎಂ.ಪಿ. ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿಯ ಸದಸ್ಯರುಗಳು.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಖಾಜಿ ನಫೀಜಾ | ನೋಡಲ್ ಅಧಿಕಾರಿಗಳು |
| 2 | ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬಿ.ಬಿ.ಎಂ.ಪಿ) |
| 3 | ಶ್ರೀ ಸಂಧೀಪ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬೀದಿ ದೀಪ) |
| 4 | ಶ್ರೀ. ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು |
| 5 | ಶ್ರೀ. ಚಿಕ್ಕಗೂಳಿಗೌಡ | ಸಹಾಯಕ ಅಭಿಯಂತರರು |
| 6 | ಕುಮಾರಿ. ಪದ್ಮ ವಿ | ಸಹಾಯಕ ಅಭಿಯಂತರರು |
| 7 | ಪ್ರಶಾಂತ್ ನಾಯಕ್ ಆರ್.ಕೆ | ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಮೂರ್ತಿ ಎನ್ | ಜಲ ಮಾಪನ ಓದುಗ( ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| | ಗೈರು ಹಾಜರಿ | |
| 1 | ಆರೋಗ್ಯ ವೈದ್ಯಾಧಿಕಾರಿಗಳು | ಧನ್ಯಕುಮಾರ್ |
| 2 | ತೋಟಗಾರಿಕೆ ಅಧೀಕ್ಷಕರು | ಸುಧೀಂದ್ರ |
| 3 | ಸಹಾಯಕ ಕಂದಾಯ ಅಧಿಕಾರಿಗಳು | ವೀಣಾ |

1. ದಿನಾಂಕ:-22.04.2022 ರಂದು ವಾರ್ಡ್ ನಂ.63 ಸಭೆಗೆ ಗೈರು ಹಾಜರಾಗಿರುವ ಅಧಿಕಾರಿ/ನೌಕರರುಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿಲಾಗಿದ್ದು, ಸದರಿ ಅಧಿಕಾರಿಗಳು/ನೌಕರರುಗಳು ಕಾರಣ ಕೇಳಿ ನೋಟಿಸ್‌ಗೆ ಸಮಜಾಷಿಸಿ ನೀಡಿರುವ ಕುರಿತು ಹಾಗೂ ದಿನಾಂಕ: 07.05.2022 ರಂದು ನಡೆದ ಸಭೆಗೆ ಗೈರು ಹಾಜರಾದ ಅಧಿಕಾರಿ/ ನೌಕರರುಗಳಿಗೆ 2ನೇ ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ಸೂಚಿಸಿದರು.
2. ಪ್ರಶಾಂತ ನಾಯಕ್ ಆರ್.ಕೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ದಿನಾಂಕ: 22.04.2022 ರಂದು ನಡೆದ ಸಭೆಯಲ್ಲಿ ಸೂಕ್ಷ್ಮ ಯೋಜನೆಯನ್ನು(Micro Plan) ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಲಾಗಿದ್ದು, ಸದರಿಯವರು 2017 ರ ಸೂಕ್ಷ್ಮ ಯೋಜನೆಯನ್ನು(Micro Plan) ದಿನಾಂಕ:07.05.2022 ರಂದು

ನೀಡಿರುತ್ತಾರೆ ಹಾಗೂ ನವೀಕರಿಸಿದ ಸೂಕ್ಷ್ಮ ಯೋಜನೆಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಿದರು.

3. ದಿನಾಂಕ: 22.04.2022 ರಂದು ನಡೆದ ಸಭೆಯಲ್ಲಿ ಶ್ರೀಮತಿ ಉಷಾ ದ್ವಿತಿಯ ದರ್ಜೆ ಗುಮಾಸ್ತ ರವರಿಗೆ ಸೂಚಿಸಿದಂತೆ, ಕಛೇರಿಯಲ್ಲಿ ಸ್ವೀಕರಿಸಿದ ಪತ್ರಗಳನ್ನು ಸ್ವೀಕೃತಿ ಪುಸ್ತಕ್ಕೆ ನಮೂದಿಸದೇ ಹಾಗೂ ಸಂಬಂಧಪಟ್ಟ ಸಹಾಯಕ ಅಭಿಯಂತರ ರವರಿಗೆ ನೀಡಿರುವುದಿಲ್ಲ. ಸ್ವೀಕರಿಸಿದ ಪತ್ರಗಳನ್ನು ಅದೇ ದಿನಾಂಕದಂದು ಸ್ವೀಕೃತ ಪುಸ್ತಕ್ಕೆ ನಮೂದಿಸಲು ಸೂಚಿಸಿದರು.
4. ಆರೋಗ್ಯ ವೈದ್ಯಾಧಿಕಾರಿಗಳು ಸಭೆಗೆ ಹಾಜರಾಗದೇ ಇರುವ ಕಾರಣ ಕೋವಿಡ್ ಸಂಬಂಧಿಸಿದ ಮಾಹಿತಿಯನ್ನು ವಿಶ್ಲೇಷಣೆ ಮಾಡಿರುವುದಿಲ್ಲ ಹಾಗೂ ಕೋವಿಡ್ ಸಂಬಂಧಿಸಿದ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಸೂಚಿಸಿದರು.
5. ತೋಟಗಾರಿಕೆ ಅಧೀಕ್ಷಕ ರವರು ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಸೂಚಿಸಿದರು.
6. ಬೆಂ.ವಿ.ಕಂ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಪೂರ್ಣಚಂದ್ರ ರವರಿಗೆ ಮುಂದಿನ ಸಭೆಗೆ ಹಾಜರಾಗಲು ಸುತ್ತೋಲೆ ಕಳುಹಿಸಲು ಸೂಚಿಸಿದರು.
7. ಸಹಾಕಯ ಕಾರ್ಯನಿರ್ವಾಹಕ ಅಭಿಯಂತರ (ವಸಂತನಗರ ಉಪವಿಭಾಗ) ರವರಿಗೆ ಅನಧೀಕೃತವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ತೆಗೆದುಕೊಂಡಿರುವ ಕ್ರಮದ ಮಾಹಿತಿಯನ್ನು ನೀಡಲು ಸೂಚಿಸಿದರು.
8. ಸಹಾಯ ದೂರುಗಳಿಗೆ ನೊಂದಣಿ ಪುಸ್ತಕವನ್ನು ನಿರ್ವಹಿಸಲು ಸೂಚಿಸಿದರು.
9. 1ನೇ ಮತ್ತು 3ನೇ ಶನಿವಾರ ಮಧ್ಯಾಹ್ನ 3:0 ಗಂಟೆಗೆ ವಾರ್ಡ್ ನಂ.63 ಸಭೆಗೆ ಎಲ್ಲಾ ಅಧಿಕಾರಿಗಳು/ ನೌಕರರುಗಳು ಹಾಗೂ ವಾರ್ಡ್ ಜನ ಪ್ರತಿನಿಧಿಗಳಿಗೆ ಕರೆ ನೀಡಲು ಹಾಗೂ ಸಭೆಯ ನಡವಳಿಯ ಪ್ರಕ್ರಿಯೆಗಳನ್ನು ಸಿದ್ದಪಡಿಸಿ ಬಿ.ಬಿ.ಎಂ.ಪಿ ಅಂತರ್ಜಾಲದಲ್ಲಿ ಅಪ್ಲೋಡ್ ಮಾಡಲು ಚಿಕ್ಕಗೂಳಿಗೌಡ, ಸಹಾಯಕ ಅಭಿಯಂತರ ರವರಿಗೆ ಸೂಚಿಸಿದರು.
10. ವಾರ್ಡ್ ನಂ.63 ಸಭೆಗೆ ಹಾಜರಾಗಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.
11. ಮುಂದಿನ ಸಭೆಗೆ ಎಲ್ಲಾ ಅಧಿಕಾರಿಗಳು/ ನೌಕರರುಗಳು ದೈಹಿಕವಾಗಿ ಹಾಗೂ ಅಂತರ್ಜಾಲ ಜೂಮ್ ನಲ್ಲಿ ಸಾರ್ವಜನಿಕರಿಗೆ ಹಾಜರಾಗಲು ಅವಕಾಶ ಕಲ್ಲಿಸಲುಕೊಡಲು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು.

ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ನಂ. 63 ಜಯಮಹಲ್

S/d
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 63 ಜಯಮಹಲ್